ಕಾಯ್ದು ಕುಳಿತಿದ್ದ ಭಾರೀ ದೆವ್ವವೊಂದು ಕೆಂಪು ಬಣ್ಣದ ಇಲಿಯಾಗಿ ರೂಪಾಂತರಗೊಂಡು ತನ್ನ ಕಾರ್ಯವನ್ನು ಪ್ರಾರಂಭಿಸಿತು. ಇಲಿಯು ಹಡಗಿನ ತಳಭಾಗದಲ್ಲಿ ಕುಳಿತು ನೋವಾ ನಿರ್ಮಿಸಿ, ಪ್ರಯಾಣಕ್ಕಾಗಿ ಸಿದ್ಧಪಡಿಸಿದ ಹಡಗಿಗೆ ತೂತು ಕೊರೆಯಲು ಪ್ರಾರಂಭಿಸಿತು.

ಅಷ್ಟು ಹೊತ್ತಿಗಾಗಲೇ ಮಳೆಯು ಬಿರುಸಿನಿಂದ ಸುರಿಯಲು ಪ್ರಾರಂಭವಾಗಿ ಮಹಾಪ್ರಳಯದ ಮುನ್ಸೂಚನೆಯನ್ನು ನೀಡತೊಡಗಿತ್ತು. ಬಿಟ್ಟೂಬಿಡದ ಮಳೆ ನಿರಂತರವಾಗಿ 40 ದಿನಗಳ ಕಾಲ ಆರ್ಭಟದಿಂದ ಸುರಿದ ಪರಿಣಾಮವಾಗಿ ಭೂಮಿಯೆಲ್ಲಾ ನೀರಿನಿಂದ ಆವೃತ್ತವಾಗಿತ್ತು. ನೋವಾನ ಹಡಗಿನಲ್ಲಿರುವ ಪ್ರಾಣಿಗಳನ್ನು ಬಿಟ್ಟರೆ ಭೂಮಿಯ ಮೇಲಿನ ಜೀವಿಗಳೆಲ್ಲಾ ನಾಶ ಹೊಂದಿದ್ದವು. ಇತ್ತ ಹಡಗಿನಲ್ಲಿ ಬೆಕ್ಕಿನ ಬಗ್ಗೆ ನೋವಾ ಮತ್ತು ಅವನ ಪತ್ನಿಯ ನಡುವೆ ಪುನಃ ಪುನಃ ಜಗಳಾಟ ನಡೆಯುತ್ತಲೇ ಇದ್ದವು. ಅತ್ತ ಇನ್ನೊಂದು ಕಡೆ ಕೆಂಪು ಇಲಿಯಾಗಿ ರೂಪಾಂತರಗೊಂಡು ಹಡಗು ಸೇರಿದ್ದ ದೆವ್ವವು ಇಲಿಯ ರೂಪದಲ್ಲಿಯೇ ಇದ್ದುಕೊಂಡು ಹಡಗಿನ ತಳಭಾಗದಲ್ಲಿ ನಿರಾತಂಕವಾಗಿ ನಿರಂತರವಾಗಿ ತೂತು ಕೊರೆಯುವ ಕಾರ್ಯವನ್ನು ನಡೆಸುತ್ತಲೇ ಇತ್ತು. ಶ್ರೀಮತಿ ನೋವಾಳ ಮುದ್ದಿನ ಬೆಕ್ಕು ಸದಾಕಾಲ ಅವಳ ಪಾದದ ಬಳಿಯೇ ಮಲಗುತ್ತಿತ್ತು. ಮತ್ತು ತನ್ನ ಸ್ವಾಮಿನಿಷ್ಠೆಯನ್ನು ತೋರುತ್ತಿತ್ತು. ಆ ಬೆಕ್ಕಿನ ಕುರಿತು ಯಾವಾಗಲೂ ಕಿಡಿಕಿಡಿಯಾಗಿರುತ್ತಿದ್ದ ನೋವಾನು ಒಂದು ದಿನ ಅದನ್ನು ಹಡಗಿನಲ್ಲಿದ್ದ ಆನೆಗಳ ಗುಂಪಿನ ಮಧ್ಯೆ ಎಸೆದು ಆನೆಗಳ ಕಾಲ್ತುಳಿತಕ್ಕೆ ಸಿಕ್ಕು ಸತ್ತರೆ ಸಾಯಲಿ ಎಂದುಕೊಂಡನು. ಆನೆಗಳ ಗುಂಪಿನ ಮಧ್ಯೆ ಬಿದ್ದ ಬೆಕ್ಕಿಗೆ ತಟ್ಟನೆ ಹಡಗನ್ನು ಕೊರೆಯುತ್ತಿದ್ದ ಕೆಂಪು ಇಲಿಯು ಕಂಡಿತು. ಕೂಡಲೇ ಶ್ರೀಮತಿ ನೋವಾಳ ಆ ಬೆಕ್ಕು ಹಡಗನ್ನು ತೂತು ಕೊರೆಯುತ್ತಿದ್ದ ಇಲಿಯನ್ನು ಬಾಯಲ್ಲಿ ಕಚ್ಚಿ ಹಿಡಿದು ನೋವಾನಿಗೆ ಕಾಣಿಕೆಯಾಗಿ ಕೊಡಲು ಹಡಗಿನ ಮೇಲ್ಭಾಗಕ್ಕೆ ಬಂದಿತು. ಸಿಟ್ಟಿನಲ್ಲಿದ್ದ ನೋವಾನು ಬೆಕ್ಕನ್ನು ಅದರ ಬಾಯಲ್ಲಿರುವ ಇಲಿಯ ಸಮೇತ ನೀರಿನಲ್ಲಿ ಎಸೆದನು.

ಆಗ ಇಲಿ ರೂಪದಲ್ಲಿದ್ದ ದೆವ್ವವು ನಿಜವಾದ ರೂಪವನ್ನು ತಾಳಿ ನೀರಿನಲ್ಲಿ ಈಜುತ್ತಾ ಹೊರಟು ಹೋಯಿತು. ಈ ಘಟನೆಯನ್ನು ಕಂಡ ನಂತರ ನೋವಾನಿಗೆ ಅಲ್ಲಿ ಹಡಗಿನಲ್ಲಿ ನಡೆದ ಸಂಗತಿಗಳ ಅರಿವಾಯಿತು. ಅವನು ತಕ್ಷಣವೇ ಬಲೆಯನ್ನು ಬೀಸಿ ಈಜು ಬಾರದೇ ನೀರಿನಲ್ಲಿ ಬಿದ್ದು ಸಾಯುತ್ತಿದ್ದ ಬೆಕ್ಕನ್ನು ರಕ್ಷಿಸಿದನು. ತಮ್ಮನ್ನೆಲ್ಲಾ ರಕ್ಷಿಸಿದ ತನ್ನ ಪತ್ನಿಯ ಬೆಕ್ಕಿಗೆ ಧನ್ಯವಾದಗಳನ್ನು ಹೇಳಿದನು.

ಆ ವೇಳೆಗಾಗಲೇ ಮೋಡಗಳ ಮಧ್ಯದಿಂದ ಸೂರ್ಯನು ಇಣುಕಿ ನೋಡುತ್ತಿದ್ದನು. ಆಗ ಬೆಕ್ಕು ಹಡಗಿನ ಮೆಟ್ಟಿಲುಗಳ ಮೇಲೆ ಕುಳಿತು ತನ್ನ ಮೈಯನ್ನು ಒಣಗಿಸಿಕೊಳ್ಳತೊಡಗಿತು. ಅಂದಿನಿಂದಲೇ ಬೆಕ್ಕುಗಳಿಗೆ ಬಾಗಿಲುಗಳ ಬಳಿ ಕುಳಿತು ಬಿಸಿಲು ಕಾಯಿಸಿಕೊಳ್ಳುವುದೆಂದರೆ ತುಂಬಾ ಇಷ್ಟವಾಗತೊಡಗಿತು. ■






**ಶಾಲ್ಮಲಿ ಭಟ್**
4ನೇ ತರಗತಿ, ಜ್ಯೋತಿ ಕೇಂದ್ರೀಯ ವಿದ್ಯಾಲಯ, ಬೆಂಗಳೂರು



**ಕೃತಿ ಎಂ.**
7ನೇ ತರಗತಿ, ಕೆ.ಎಲ್.ಇ. ನಾಗರಬಾವಿ, ಬೆಂಗಳೂರು

'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
ವಿಳಾಸ: editorsu@sudha.co.in

